ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಈ ರೇಂಜ್ ಆಫೀಸರ್ಸ್ ವರ್ಗಾವಣೆ ಇದೆಯೆಲ್ಲಾ, ಈ ವರ್ಗಾವಣೆಯ ಬಗ್ಗೆ ಬಹಳ ಒತ್ತಡ ನನ್ನ ಮೇಲೆ. ಎಲ್ಲಿ ಟಿಂಬರ್ ಸಿಗುತ್ತದೆ, ಅಲ್ಲಿಗೇ ಪೋಸ್ಟ್ ಮಾಡಿ ಎಂದು ಒತ್ತಡ. ಎಲ್ಲೆಲ್ಲಿ ಬಹಳವಾಗಿ ಯಾರ್ಯಾರು ಫಾರೆಸ್ಟ್ ಕಂಟ್ರಾಕ್ಟ್ ಮಾಡುತ್ತಾರೆ, ಹಂಗಾಮಿ ಲೈಸನ್ಸ್‌ಗಳನ್ನು ತೆಗೆದುಕೊಂಡು ಯಾರು ಟಿಂಬರ್‌ಗಳನ್ನು ಸಾಗಾಣಿಕೆ ಮಾಡುತ್ತಾರೆ, ಅಂಥವರಿಗೆ ಅವರಿಗೆ ಬೇಕಾದ ರೇಂಜ್ ಆಫೀಸರ್ಸ್‌ಗಳು ಬೇಕಲ್ಲ. ಅದಕ್ಕಾಗಿ ನನ್ನ ಮೇಲೆ ಒತ್ತಡ ಬರುತ್ತಿದೆ. ಈಗ ನನ್ನ ಮೇಲೆ ಒಂದು ದೂರು ಹೇಳಿದರು. ವರ್ಗಾವಣೆಯಲ್ಲಿ ಹಣ ಮಾಡಿದರು ಎಂದು. ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಯಾರು ಆರೋಪಣೆ ಮಾಡಿದ್ದಾರೆ ಆ ಮನುಷ್ಯ ಮಾಫಿ ಲೈಸನ್ಸ್ ಹೋಲ್ಡರ್. ಯಾರು ರೇಂಜರ್ ಇದ್ದಾರೆ ಅವರು ಅಲ್ಲೇ ಹೆಗ್ಗಡ ದೇವನ ಕೋಟೆಯಲ್ಲಿಯೇ ಇದ್ದಾರೆ. ಅವರನ್ನು ಇಲ್ಲಿಗೇ ಹಾಕಿ ಎಂದು ಹೇಳಿದರು. ನಾನು ಆದರ ವಿವರವನ್ನು ಈ ಸದನಕ್ಕೆ ತಿಳಿಸುತ್ತೇನೆ. ಅವರು ಅಲ್ಲೇ ಇರಬೇಕು, ಅವರಿಗೆ ಅನುಕೂಲ ಆಗಬೇಕು ಎಂದು ಅವರನ್ನು ಅಲ್ಲೇ ಹಾಕಿ ಎಂದರು. ನಾನು ಹಾಕಲಿಲ್ಲ ನಾನು ಏನು ಮಾಡಿದೆ ಎಂದರೆ, ಎಲ್ಲಿ ಚಟ್ಟವಾದ ಕಾಡು ಇದೆ, ಕಾಡಿನಲ್ಲಿರತಕ್ಕ ರೇಂಜ್ ಆಫೀಸರ್‌ಗಳನ್ನು, ಫಾರೆಸ್ಟ್ ಆಫೀಸರ್‌ಗಳನ್ನು ತೆಗೆದು ಬೀದರ್ ಡಿಸ್ಟ್ರಿಕ್ಟ್‌ನಿಂದ ಹಂಚಿದ್ದೇನೆ. ಎಲ್ಲೆಲ್ಲಿ ಬಯಲು ಪ್ರದೇಶ ಇದೆ. ಅವರನ್ನು ಕಾಡಿನ ಪ್ರದೇಶಕ್ಕೆ ಮತ್ತು ಎಲ್ಲಿ ಸ್ಮಗ್ಲಿಂಗ್ ಜಾಗ ಇದೆ ಅಂಥಾದ್ದನ್ನು ತಡೆ ಹಿಡಿಯಲಿಕ್ಕೆ ಈ ರೀತಿ ಮಾಡಿದ್ದೇನೆ. ಸದಸ್ಯರಿಗೆ ಅನುಕೂಲ ಆಗದೇ ಹೋದರೆ ಲಂಚ ಹೊಡೆದಿದ್ದಾರೆ. ಅದಕ್ಕಾಗಿ ಹಾಕಿದ್ದಾರೆ ಎಂದು ಹೇಳುತ್ತಾರೆ. ನನ್ನ ಇಲಾಖೆಯ ವರ್ಗಾವಣೆಯಲ್ಲಿ ನನ್ನ ಮೇಲೆ ಆರೋಪಣೆ ಮಾಡಿದರು. ಮತ್ತು ಇಂಡಿಯಾ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ. Graft charges are made against the Forest Minister Sri B. Basavalingappa I saw it in Delhi. They are simply allegations. ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ ಸಿಂಪಲ್ ಪ್ರೊಸೀಜರ್ ಪ್ರಕಾರ ಯಾರಾದರೂ ದೂರು ಹೇಳಿದರೆ ಹಾಗೂ ನಿಂದನೆ ಮಾಡುವಾಗ ಅವರು ರೈಟಿಂಗ್‌ನಲ್ಲಿ ಕೊಡಬೇಕು. ಅವರು ತಮ್ಮ ಪರವಾನಗಿಯನ್ನು ತೆಗೆದುಕೊಳ್ಳಬೇಕು. ಆದರೆ ತಮ್ಮ ಪರವಾನಗಿಯನ್ನು ತೆಗೆದುಕೊಳ್ಳದೆ ಅವರು ಲಂಚ ತೆಗೆದುಕೊಂಡಿದ್ದಾರೆ ಎಂಬ ವಾದವನ್ನು ಏನು ತೂಕಕ್ಕಿದ್ದಾರೆ. ಇಂಥಾದ್ದಕ್ಕೆ ದಯವಿಟ್ಟು ತಾವು ಅಧ್ಯಕ್ಷರಾಗಿರುವವರಿಗೆ ಅವಕಾಶ ಕೊಡಕೂಡದು ಎಂದು ಬಹಳ ವಿನಯ ಪೂರ್ವಕವಾಗಿ ಹೇಳುತ್ತಿದ್ದೇನೆ. ಅವರು ಮಾಡಿದ್ದು ಪ್ರೊಸೀಜರ್ ಪ್ರಕಾರ ಸರಿ ಇಲ್ಲ ಆದಕ್ಕೆ ವಿರುದ್ಧವಾಗಿದೆ. ಆವರು ಏನು ಅಲಿಗೇಷನ್ಸ್ ಮಾಡಿದರು ಅದು without any basis. ಅದನ್ನು ತಾವು ಕಡತದಿಂದ ತೆಗೆದು ಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ.

ತಳಿ ಅಭಿವೃದ್ಧಿ ಕೇಂದ್ರ ಸ್ಥಾಪನೆ

೫೭೪. ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿಯಲ್ಲಿ ತಳಿ ಅಭಿವೃದ್ಧಿ ಕೇಂದ್ರವನ್ನು ತೆರೆಯಲು ಸುಮಾರು ೮ ವರ್ಷಗಳ ಹಿಂದೆ ವೀರಭದ್ರಪ್ಪಗೌಂಗಡಿ ಎಂಬುವರು ಒಂದು ಎಕರೆ ಜಮೀನನ್ನು ಉಚಿತವಾಗಿ ಸರ್ಕಾರಕ್ಕೆ ದಾನ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅದನ್ನು ತೆರೆಯದಿರಲು ಕಾರಣವೇನು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಹೌದು.

ಆ) ಸಾಕಷ್ಟು ಹಣಕಾಸಿನ ವ್ಯವಸ್ಥೆ ಇಲ್ಲದಿರುವುದರಿಂದ.

ಶ್ರೀ ಬಿ. ಹೆಚ್. ಯಂಕಾನಾಯ್ಕ್. ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಬಂದಿಲ್ಲ. ಒಂದು ಎಕರೆ ಜಮೀನು ಸರ್ಕಾರದ ಸ್ವಾಧೀನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.— ನೀವೇ ಓದಿಕೊಳ್ಳಿ.

ಶ್ರೀ ಬಿ. ಹೆಚ್. ಯಂಕಾ ನಾಯಕ್.— ನಾನು ಓದುವುದಕ್ಕಿಂತ ಸಚಿವರೇ ಓದಿ ಹೇಳಲಿ. ಮುಂದಾದರೂ ದಾನ ಕೊಟ್ಟಿರುವಂತಹ ಜಮೀನನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆಯೇ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದು ನಿಜ. ಒಂದು ಎಕರೆ ಜಮೀನನ್ನು ಶ್ರೀ ವೀರಭದ್ರಪ್ಪ ಎಂಬುವರು ದಾನ ಮಾಡಿದ್ದಾರೆ. ಅದು ಕೀ ವಿಲೇಜ್ ಸ್ಕೀಮ್. ಅಲ್ಲಿ ಆಸ್ಪತ್ರೆ ಕಟ್ಟಬೇಕು ಎಂಬ ಒಂದು ಸ್ಕೀಮ್ ಪ್ರಕಾರ ಕೊಟ್ಟಿದ್ದಾರೆ. ಅದರ ಆದ ಮೇಲೆ ಜಿಲ್ಲಾ ಪರಿಷತ್ ಆಸ್ಪತ್ರೆಕ್ಕೆ ಬಂತು. ಅದು ಜಿಲ್ಲಾ ಪರಿಷತ್‌ಗೆ ಹೋಯಿತು. ಜಮೀನು ಹಾಗೆಯೇ ಇದೆ. ನಾವು ಏನೂ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಹರಪನಹಳ್ಳಿಯಲ್ಲಿ ಈಗಿರುವ ದನದ ಆಸ್ಪತ್ರೆ ಶಿಥಿಲ ಆಗಿದೆ. ಅಲ್ಲಿ ಒಂದು ಆಸ್ಪತ್ರೆ ಕಟ್ಟಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಆದರೆ ಹಣ ಒದಗಿಸುವುದಕ್ಕೆ ಆಗಿಲ್ಲ.

ಶ್ರೀ ಬಿ.ಹೆಚ್. ಯಂಕಾ ನಾಯಕ್.— ಸರ್ಕಾರ ಒಂದು ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಇದು ಸರ್ಕಾರದ ಸ್ವಾಧೀನದಲ್ಲಿತ್ತು. ಈಗ ಅದು ಜಿಲ್ಲಾ ಪರಿಷತ್‌ಗೆ ಸ್ವಾಧೀನಕ್ಕೆ ಹೋಗಿದೆ.

ಪ್ರಶ್ನೆ ಸಂಖ್ಯೆ: ೫೩೫ (ಸದಸ್ಯರು ಗೈರು ಹಾಜರು)

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು

೫೭೩. ಶ್ರೀ ಕರಿಯಣ್ಣ (ಹೊಳಿಹೊನ್ನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ? ಆ ಪೈಕಿ ಸರ್ಕಾರದ ಹಾಗೂ ಖಾಸಗಿಯವರ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಖಾಸಗಿಯವರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ಯಾವ ಯಾವ ಜಿಲ್ಲೆಯಲ್ಲಿ ಇವೆ ? ಇವುಗಳನ್ನು ಯಾರು ಯಾರು ಅಥವಾ ಯಾವ ಸಂಸ್ಥೆಗಳು ನಡೆಸುತ್ತವೆ (ಹೆಸರುಗಳೊಂದಿಗೆ ವಿವರ ನೀಡುವುದು).

ಇ) ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶಕ್ಕೆ ಸರ್ಕಾರ ಅವಕಾಶ ಕೊಟ್ಟಿರುತ್ತದೆ ಹಾಗೂ ಪ್ರತಿ ಕಾಲೇಜಿಗೆ ನೀಡಿರುವ ಪ್ರವೇಶ ಪ್ರಮಾಣವೆಷ್ಟು ?

ಈ) ಇದರಲ್ಲಿ ಹರಿಜನರ ಗಿರಿಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ವಿಶೇಷವಾತಿ ಏನಾದರೂ ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳು ೪
ಖಾಸಗಿ ವೈದ್ಯಕೀಯ ಕಾಲೇಜುಗಳು ೧೪

ಆ) ವಿವರಣೆಯು ಅನುಬಂಧ 'ಎ'ರಲ್ಲಿ ಲಗತ್ತಿಸಲಾಗಿದೆ.

ಇ) ಖಾಸಗಿ ವೈದ್ಯಕೀಯ ಕಾಲೇಜುಗಳು ಪ್ರವೇಶ ಸಾಮರ್ಥ್ಯ ೧೯೯೯-೯೦

೧ ಕಸ್ತೂರಬಾ ವೈದ್ಯಕೀಯ ಕಾಲೇಜ್, ಮಂಗಳೂರು ೨೫೦
ಕಸ್ತೂರಬಾ ವೈದ್ಯಕೀಯ ಕಾಲೇಜ್, ಮಣಿಪಾಲ ೨೫೦
೨) ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು ೬೦
೩) ಜೆ. ಎನ್. ವೈದ್ಯಕೀಯ ಕಾಲೇಜ್, ಬೆಳಗಾಂ ೧೭೫
೪) ಎಂ. ಆರ್. ವೈದ್ಯಕೀಯ ಕಾಲೇಜ್, ಗುಲ್ಬರ್ಗಾ ೧೫೦
೫) ಜೆಜೆಎಂ ವೈದ್ಯಕೀಯ ಕಾಲೇಜ್, ದಾವಣಗೆರೆ ೨೫೦
೬) ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜ್ ಬೆಂಗಳೂರು ೧೦೦
೭) ಕೆಂಪೇಗೌಡ ವೈದ್ಯಕೀಯ ಕಾಲೇಜ್, ಬೆಂಗಳೂರು ೫೦
೮) ಡಾ. ಬಿ. ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜ್, ಬೆಂಗಳೂರು ೫೦